ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್.ಸಿ. :**116/20**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹಾದೇವಸ್ವಾಮಿ ಎಮ್ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಮರಿಸಿದ್ದಶೆಟ್ಟಿ | **12.09.2023** |
| ವಯಸ್ಸು | : | 44 ವರ್ಷ | |
| ವೃತ್ತಿ | : | ಪಿ ಐ, ಚೆಸ್ಕಾಮ್ ಜಾಗೃತಿ ದಳ, ಮಡಿಕೇರಿ. | ಪಿ.ಡಬ್ಲೂಃ 16 |
| ವಾಸಸ್ಥಳ | : | ಮಡಿಕೇರಿ | ಸಿ.ಡಬ್ಲೂಃ 31 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2018 ಅಕ್ಟೋಬರ್ ನಿಂದ ಅಕ್ಟೋಬರ್ 2019 ರವರೆಗೆ ನಾನು ಪೊಲೀಸ್ ಇನ್ಸ್ ಪೆಕ್ಟರ್ ಆಗಿ ನಜರಬಾದ್ ಪೊಲೀಸ್ ಠಾಣೆ , ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ 12.02.2019 ರಂದು ಈ ಪ್ರಕರಣದ ಕಡತವನ್ನು ಮಧ್ಯರಾತ್ರಿ 12.30 ರ ಸಮಯದಲ್ಲಿ ಚಾಸಾ 30 ರವರಿಂದ ಪಡೆದು , ಪರಿಶೀಲಿಸಿ ನಂತರ ಮೃತನ ಗೋಪಾಲಗೌಡ ಸರ್ಕಾರಿ ಆಸ್ಪತ್ರೆಯಲ್ಲಿ ರುವ ತುರ್ತು ಚಿಕಿತ್ಸಾ ಘಟಕದಲ್ಲಿರುವ ಮೃತನ ದೇಹವನ್ನು ಪರಿಶೀಲಿಸಿ ಶವಪಂಚನಾಮೆ ಮಾಡುವ ಸಂಬಂಧ, ಪಂಚಾಯಿತಿದಾರರಿಂದ ಚಾಸಾ 4 ಗುರುರಾಜ್, ಚಾಸಾ 5 ಸೈಮನ್, ಚಾಸಾ 6 ರವಿಕಿರಣ ಅವರಿಗೆ ನೋಟೀಸ್ ನೀಡಿ, ಶವ ತನಿಖೆಯನ್ನು ಕೈಗೊಂಡೆನು. ಸದರಿ ನೋಟೀಸ್ ನಿಪಿ 5 ಎಂದು ಗುರುತಿಸಲಾಗಿದೆ. ಅದರಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ 5 (ಡಿ) ಎಂದು ಗುರುತಿಸಲಾಯಿತು. ನಂತರ ಅವರ ರಕ್ತ ಸಂಬಂಧಿಕರಾದ ಚಾಸಾ 7 ಮತ್ತು 8 ರವರ ಹೇಳಿಕೆಯನ್ನು ಶವ ಪಂಚನಾಮೆ ಕಾಲದಲ್ಲಿ ಪಡೆದಿರುತ್ತೇನೆ. ನಂತರ ಶವ ಪಂಚನಾಮೆ ಕಾಲದಲ್ಲಿ ಮೃತನ ಮೈಮೇಲೆ ಬೆನ್ನಿನ ಮಧ್ಯ ಭಾಗದಲ್ಲಿ ಕುತ್ತಿಗೆಯಿಂದ 3 ಇಂಚು ಕೆಳಗೆ, ಒಂದು ಇಂಚು ಉದ್ದದ ಗಾಯ ಇರುತ್ತದೆ. ಬೆನ್ನಿನ

ಎಡಭಾಗ, ತೊಳು ಪಕ್ಕೆ ಹಿಂಭಾಗ ಒಂದು ಇಂಚು ಉದ್ದದ, ಅರ್ಧ ಇಂಚು ಅಗಲದ 2 ಕಡೆ ಗಾಯ ಕಂಡು ಬಂದಿರುತ್ತದೆ. ಈ ಶವ ಪಂಚನಾಮೆಯನ್ನು ಮಧ್ಯಾಹ್ನ 12.45 ರಿಂದ 2.15 ಗಂಟೆಯವರೆಗೆ ಮಾಡಿರುತ್ತೇನೆ. ಸದರಿ ಶವ ಪಂಚನಾಮೆಯನ್ನು ಈಗಾಗಲೇ ನಿಪಿ 6 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ 6 ( ಎಪ್) ಎಂದು ಗುರುತಿಸಲಾಯಿತು. ಮೃತನ ಶವವನ್ನು ಸಿಬ್ಬಂದಿಗಳೊಂದಿಗೆ ಕೆ ಆರ್ ಆಸ್ಪತ್ರೆಯ ಶವಗಾರಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿರುತ್ತೇನೆ. ನಂತರ ಕೃತ್ಯ ನಡೆದ ಸ್ಥಳದ ಸ್ಥಳ ಮಹಜರ ಮಾಡುವ ಸಂಬಂಧ ರಾಘವೇಂದ್ರ ನಗರದ ಭೋವಿ ಜನಾಂಗದ ಸ್ಮಶಾನದ ರಸ್ತೆಯಲ್ಲಿರುವ ಮನೆ ನಂ. 1572 ರ ಪ್ರೇಮಮ್ಮ ರವರ ಮನೆಯ ಮುಂಭಾಗ, ಪ್ರಕರಣದ ಪಿರ್ಯಾದುದಾರರು ಕೃತ್ಯ ನಡೆದ ಸ್ಥಳವನ್ನು ತೋರಿಸಿ ಪಂಚರಾದ ಮ್ಯಾಥೀವ್ ಬೆಂಥ್ಯಾಮ್ ಹಾಗೂ ಭರತ್ (ಚಾಸಾ2 ಮತ್ತು 3) ಅವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 8 ಗಂಟೆಯಿಂದ 9 ಗಂಟೆಯವರೆಗೆ ಮಾಡಿರುತ್ತೇನೆ. ಮಹಜರ ಕಾಲದಲ್ಲಿ ಕೃತ್ಯ ನಡೆದ ಸ್ಥಳದಿಂದ ರಕ್ತ ಮಿಶ್ರಿತ ಮಣ್ಣು, ರಸ್ತೆಯ ಠಾರ್ ಚುರುಗಳನ್ನು ಡಬ್ಬದಲ್ಲಿ ಹಾಕಿ, ಎಸ್ ಎಂಬ ಅಕ್ಷರದಿಂದ ಸೀಲ್ ಮಾಡಿರುತ್ತೇನೆ ಮತ್ತು ಕಿಂಗ್ ಫೀಶರ್ ಬಾಟಲ್‌ನ ಗಳ ಚುರುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಎಸ್ ಎಂಬ ಅಕ್ಷರನಿಂದ ಸೀಲ್ ಮಾಡಿರುತ್ತೇನೆ. ಸದರಿ ಸ್ಥಳ ಮಹಜರ್ ಅನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ–2(ಡಿ) ಎಂದು ಗುರುತಿಸಲಾಯಿತು. ಕಿಂಗ್ ಫೀಶರ್ ಬೀಯರ್ ಬಾಟಲ್ ಗಳ ಚುರುಗಳನ್ನು ಸಾಕ್ಷಿ ನೋಡಿ ಗುರುತಿಸಿದರು. ಅವುಗಳನ್ನು ಎಮ್ ಓ 1 ಎಂದು ಗುರುತಿಸಲಾಗಿದೆ. ಸೀಲ್ ಮಾಡಲಾದ ರಕ್ತ ಮಿಶ್ರಿತ ಮಣ್ಣು ಮತ್ತು ಠಾರ್ ಮಿಶ್ರಿತ ಕಲ್ಲಿನ ಚುರುಗಳ ಡಬ್ಬಿಯನ್ನು ನ್ಯಾಯಾಲಯದ ಅನುಮತಿ ಮೆರೆಗೆ ತೆರೆಯಲಾಯಿತು. ಸದರಿ ವಸ್ತುಗಳ ಡಬ್ಬಿಯನ್ನು ಎಮ್ ಓ 2 ಎಂದು

ಗುರುತಿಸಲಾಯಿತು. ಬಟ್ಟೆಯ ಕವರ್ ಮೇಲೆ ಸಾಕ್ಷಿಯ ಸಹಿ ಇರುವ ಚೀಟಿಯನ್ನು ಅಂಟಿಸಿದ್ದು ಸದರಿ ಸಹಿಯನ್ನು ಸಾಕ್ಷಿಯು ಗುರುತಿಸಿದ್ದಾರೆ. ಸದರಿ ಸಾಕ್ಷಿಯ ಸಹಿಯನ್ನು ಎಮ್ ಓ 2 (ಎ) ಎಂದು ಗುರುತಿಸಲಾಯಿತು.

3. ಸ್ಥಳ ಮಹಜರ್ ಕಾಲಕ್ಕೆ ಪಂಚರನ್ನು ನೋಟಿಸ್ ಮೂಲಕ ಬರಮಾಡಿಕೊಂಡಿರುತ್ತದೆ. ಸದರಿ ನೋಟೀಸ್ ನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಬಂದು ಸದರಿ ಅಮಾನತ್ತು ವಸ್ತುಗಳನ್ನು ಠಾಣಾ ಪಿ ಎಫ್ ನಂ. 14/19 ರಂತೆ ನೊಂದಾಯಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಕೆ ಆರ್ ಆಸ್ಪತ್ರೆಗೆ ಬೇಟಿ ನೀಡಿ ಶವ ಪರೀಕ್ಷೆ ನಡೆಸುವ ಸಂಬಂಧ 146(1) ಮತ್ತು (2) ರಿತ್ಯ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ನಂತರ ಮೃತನ ವಾರಸ್ಸುದಾರರಿಗೆ ಶವವನ್ನು ನೀಡಿರುತ್ತೇನೆ. ನಂತರ ಪಿರ್ಯಾಧಿದಾರ ನಂದಸಾಗರ ರಾಜ ಅರಸ್ ಚಾಸಾ 1 ರವರ ಮರು ಹೇಳಿಕೆಯನ್ನು ಪಡೆದಿರುತ್ತೇನೆ.

4. ದಿಃ 13.02.2019 ರಂದು ಹೆಚ್ ಸಿ141 ರವರು ಪ್ರಕರಣದ ಆರೋಪಿ ಪವನ್ , ಮನೋಜ್ ನನ್ನು ವಶಕ್ಕೆ ಪಡೆದು ಸಂಜೆ 6.30 ಕ್ಕೆ ವರದಿಯೊಂದಿಗೆ ಠಾಣೆಗೆ ಹಾಜರುಪಡಿಸಿರುತ್ತಾರೆ. ಸದರಿ ಆರೋಪಿಗಳಾದ ಪವನ್ ಮತ್ತು ಮನೋಜ್ ರವರನ್ನು ವಿಚಾರಣೆ ಮಾಡಿರುತ್ತೇನೆ ಹಾಗೂ ಆರೋಪಿ ಪವನ್ ರವರನ್ನು ದಸ್ತಗಿರಿ ಮಾಡಿ ಸ್ವ ಇಚ್ಛೆ ಹೇಳಿಕೆಯನ್ನು ಪಡೆಯಲಾಗಿ, ಕೃತ್ಯಕ್ಕೆ ಬಳಸಲಾದ ಪೈಪ್ ನ್ನು ಬೀಸಾಕಿರುವ ಜಾಗವನ್ನು ತೋರಿಸುತ್ತೇನೆ ಎಂದು ತಿಳಿಸಿದ ಮೆರೆಗೆ ಪಂಚರಾದ ಶಿವದತ್ತು, ಶಶಿಕುಮಾರ್ ರವರಿಗೆ ನೋಟೀಸ್ ನೀಡಿರುತ್ತೇನೆ. ಸದರಿ ನೋಟೀಸ್ ಅನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. 1 ನೇ

ಆರೋಪಿ ಪವನ್ ನ ಸ್ವ ಇಚ್ಛಾ ಹೇಳಿಕೆಯ ಭಾಗವನ್ನು ನಿಪಿ.– 19 ಎಂದು, ಸಾಕ್ಷಿಯ ಸಹಿಯನ್ನು ನಿಪಿ.– 19 (ಎ) ಎಂದು ಗುರುತಿಸಲಾಯಿತು. ಆರೋಪಿ ಪವನ್ ನಿಪಿ 19 ಕ್ಕೆ ಸಹಿ ಮಾಡಿದ್ದು , ಅದನ್ನು ಗುರುತಿಸುತ್ತೇನೆ. ಸಾಕ್ಷಿಯು ಆತನ ಸಹಿಯನ್ನು ಗುರುತಿಸಿದ್ದಾರೆ. ಆರೋಪಿ ಪವನ್ ರವರ ಸಹಿಯನ್ನು ನಿಪಿ – 19 (ಬಿ) ಎಂದು ಗುರುತಿಸಲಾಯಿತು. ನಂತರ ಆರೋಪಿ ಪವನ್ ರಾಘವೇಂದ್ರ ಬಡಾವಣೆಯ ಭೋವಿ ಜನಾಂಗದ ಸ್ಮಶಾನದ ಒಳಗೆ ರೋಜ ಗಿಡದ ಪೊದೆಯೋಳಗೆ ಇಟ್ಟಿರುವ ಒಂದು ಪ್ಲಾಸ್ಟಿಕ್ ಪೈಪ್ ನ್ನು ತೋರಿಸಿದ ಮೆರೆಗೆ ಅದನ್ನು ಪಂಚರ ಸಮಕ್ಷಮ ಅಮಾನತ್ತು ಪಡೆಸಿಕೊಂಡಿರುತ್ತೇನೆ. ಈಗ ಸೀಲ್ ಮಾಡಲಾದ ಒಂದು ಪ್ಲಾಸ್ಟಿಕ್ ಪೈಪ್ ನ್ನು ಅನುಮತಿ ಮೆರೆಗೆ ತೆಗೆಯಲಾಯಿತು. ಸದರಿ ಪ್ಲಾಸ್ಟಿಕ್ ಪೈಪ್ ನ್ನು ಎಮ್ ಓ 3 ಎಂದು ಗುರುತಿಸಲಾಯಿತು. ಸದರಿ ಪ್ಲಾಸ್ಟಿಕ್ ಪೈಪ್ ನ್ನು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಪ್ರಕರಣ ವಿವರ ಬರೆದ ಚೀಟಿಯಲ್ಲಿ ನನ್ನ ಸಹಿ ಮಾಡಿ ಅಂಟಿಸಿರುತ್ತೇನೆ. ಸದರಿ ಸಹಿಯನ್ನು ಎಮ್ ಓ 3 (ಎ) ಎಂದು ಗುರುತಿಸಲಾಯಿತು. ನಂತರ ಕೃತ್ಯದ ಸಮಯದಲ್ಲಿ ಮೃತನ ಮೇಲೆ ಹೊಡೆದ ಪೈಪ್ ಎಂದು ತಿಳಿಸಿರುತ್ತಾರೆ. ಈ ಮಹಜರನ್ನು ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ ಮಾಡಲಾಗಿರುತ್ತದೆ. ಸದರಿ ಮಹಜರನ್ನು ಈಗಾಗಲೇ ನಿಪಿ–7 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ–7(ಸಿ) ಎಂದು ಗುರುತಿಸಲಾಯಿತು. ನಂತರ ಆರೋಪಿ ಪವನ್ ಯೊಂದಿಗೆ ಠಾಣೆಗೆ ಬಂದು ಸದರಿ ಅಮಾನತ್ತು ಪ್ಲಾಸ್ಟಿಕ್ ಪೈಪ್ ಅನ್ನು ಠಾಣಾ ಪಿ ಎಫ್ ನಂ. 15/19 ರಂತೆ ನೊಂದಾಯಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ಸದರಿ ಪವನ್ ಆಗಿರುತ್ತಾನೆ. ಕೃತ್ಯದ ಸಮಯದಲ್ಲಿ ಉಪಯೋಗಿಸಿದ ಚಾಕುವನ್ನು ಆರೋಪಿ ಪ್ರಜ್ವಲ್ ನು ತೆಗೆದುಕೊಂಡು ಹೋಗಿರುತ್ತಾನೆ ಎಂದು ತಿಳಿಸಿರುತ್ತಾರೆ. ಅದೇ ದಿನ ನಂತರ ಮಧ್ಯಾಹ್ನ

12.30 ಗಂಟೆಯಲ್ಲಿ ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಪರಾಧಿ ಜೀವನ ಕುಮಾರ್, ಮದನ್ ಹಾಗೂ ಅಭಿ ಇವರನ್ನು ಸಿಬ್ಬಂಧಿಗಳು ಹಾಜರುಪಡಿಸಿದ ಮೆರೆಗೆ ಸದರಿಯವರನ್ನು ಕಾನೂನಿನ ಅಭಿರಕ್ಷಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಅವರ ಜನ್ಮ ದಿನಾಂಕ ದಾಖಲೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿ ಪವನ್ ನ್ನು ನ್ಯಾಯಾಂಗ ಬಂಧನ ಪತ್ರದೊಂದಿಗೆ ಸೂಕ್ತ ಬೆಂಗಾವಲಿನೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ನ್ಯಾಯಾಂಗ ಬಂಧನಕ್ಕೆ ಹಾಜರುಪಡಿಸಿರುತ್ತೇನೆ.

5. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಾಕ್ಷಿಧಾರರಾದ ಮನೋಹರ್ , ಚಂದ್ರಶೇಖರ್ , ಬಾಲಸುಬ್ರಹ್ಮಣ್ಯ ಮತ್ತು ನಮ್ಮ ಸಿಬ್ಬಂಧಿಯವರಾದ ಮಧುಕೇಶವ, ಶ್ರೀನಿವಾಸ ಹಾಗೂ ಪ್ರಕಾಶರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 15.02.2019 ರಂದು 2 ನೇ ಆರೋಪಿ ಪ್ರೇಮ ಸಾಗರ್ , 3 ನೇ ಆರೋಪಿ ಪ್ರಜ್ವಲ್ ರವರನ್ನು ನಮ್ಮ ಸಿಬ್ಬಂದಿ ಪ್ರಕಾಶ್ ಮತ್ತು ಶ್ರೀನಿವಾಸ್ ಹಾಗೂ ಮಧುಕೇಶವ ರವರು ಠಾಣೆಗೆ ತಂದು ಹಾಜರುಪಡಿಸಿ ವರದಿ ನೀಡಿದರು ಮತ್ತು ನಂತರ ಸದರಿ ಆರೋಪಿಗಳನ್ನು ವಿಚಾರಣೆ ಮಾಡಿರುತ್ತೇನೆ. ಆರೋಪಿ ಪ್ರಜ್ವಲ್ ರವರು ಸ್ವ ಇಚ್ಛೆ ಹೇಳಿಕೆಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಚಾಕುವನ್ನು ಬೀಸಾಡಿರುವ ಜಾಗವನ್ನು ತೋರಿಸುತ್ತೇನೆ ಎಂದು ತಿಳಿಸಿದ ಮೆರೆಗೆ ಪಂಚರಾದ ಸುಹಾಸ್ ಮತ್ತು ದೀಪು ರವರಿಗೆ ಪಂಚರಾಗಿ ಹಾಜರಾಗುವಂತೆ ನೋಟೀಸ್ ನೀಡಿರುತ್ತೇನೆ. ಸದರಿ ನೋಟೀಸ್ ನ್ನು ಈಗಾಗಲೇ ನಿಪಿ.–10 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.–10 (ಸಿ) ಎಂದು ಗುರುತಿಸಲಾಯಿತು. ನಂತರ ಆರೋಪಿ ಪ್ರಜ್ವಲ್ ಗಿರಿಯಾ ಭೋವಿ ಪಾಳ್ಯದ ಮುಖ್ಯ ರಸ್ತೆಯಲ್ಲಿರುವ ಸಿದ್ದ ಪ್ವಾಜಿ ದೇವಸ್ಥಾನದ ಉತ್ತರಿಕ್ಕಿರುವ ಮೈದಾನದ ಕಾಡು ಜಾತಿಯ ಮರದ ಕೆಳಗಿನ ಪೊದೆಯೊಳಗೆ ಬೀಸಾಕಿದ ಚಾಕುವನ್ನು ಪಂಚರ ಸಮಕ್ಷಮ ಅಮಾನತ್ತು

ಪಡೆಸಿಕೊಂಡಿರುತ್ತೇನೆ. ಸದರಿ ಚಾಕು 9 ಇಂಚು ಉದ್ದದ ಸ್ಟೀಲ್ ಚಾಕು ಆಗಿರುತ್ತದೆ. ಸದರಿ ಸೀಲು ಮಾಡಲಾದ ಚಾಕುವನ್ನು ನ್ಯಾಯಾಲಯದ ಅನುಮತಿ ಮೆರೆಗೆ ತೆರೆಯಲಾಯಿತು. ಸದರಿ ಚಾಕುವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಎಮ್ ಓ 4 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ಎಮ್ ಓ 4 (ಎ) ಎಂದು ಗುರುತಿಸಲಾಯಿತು. ಸದರಿ ಚಾಕುವನ್ನು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಪ್ರಕರಣ ವಿವರ ಬರೆದ ಚೀಟಿಯಲ್ಲಿ ನನ್ನ ಸಹಿ ಮಾಡಿ ಅಂಟಿಸಿರುತ್ತೇನೆ. ಈ ಮಹಜರನ್ನು ಸಮಯ ಬೆಳಿಗ್ಗೆ 11.15 ಗಂಟೆಯಿಂದ 12.00 ಗಂಟೆಯವರೆಗೆ ಮಾಡಲಾಗಿರುತ್ತದೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ–9 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ–9(ಸಿ) ಎಂದು ಗುರುತಿಸಲಾಯಿತು. ಆರೋಪಿ ಪ್ರಜ್ವಲ್ ತನ್ನ ಸ್ವ ಇಚ್ಛೆ ಹೇಳಿಕೆಯಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಚಾಕುವನ್ನು ಕಿತ್ತುಕೊಂಡು ಮೃತನ ಎದೆಗೆ ಚುಚ್ಚಿ ನಂತರ ಸದರಿ ಚಾಕುವನ್ನು ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿರುತ್ತಾನೆ. ಸದರಿ ಸ್ವ ಇಚ್ಛಾ ಹೇಳಿಕೆಯ ಭಾಗವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ–20 ಎಂದು ಸಾಕ್ಷಿಯ ಸಹಿಯನ್ನು ನಿಪಿ 20 – (ಎ) ಎಂದು ಗುರುತಿಸಲಾಯಿತು. ಆರೋಪಿ ಪ್ರಜ್ವಲ್‌ರವರ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು ಸದರಿ ಆರೋಪಿ ಪ್ರಜ್ವಲ್ ನ ಸಹಿಯನ್ನು ನಿಪಿ – 20 (ಬಿ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿ ಪ್ರೇಮ ಸಾಗರ ಅಲಿಯಾಸ್ ಪ್ರೇಮ್ ಇವರ ಸ್ವ ಇಚ್ಛಾ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಸದರಿ ಸ್ವ ಇಚ್ಛೆ ಹೇಳಿಕೆಯು ಸದರಿ ಆರೋಪಿಯು ಉಳಿದ ಆರೋಪಿಗಳೊಂದಿಗೆ ಕೊಲೆಯನ್ನು ಮಾಡಬೇಕೆಂದು ಸಂಚನ್ನು ರೂಪಿಸಿದ್ದರು ಎಂದು ಹೇಳಿದ್ದಾರೆ. ನಂತರ ಆರೋಪಿಯೊಂದಿಗೆ ಠಾಣೆಗೆ ಬಂದು ಸದರಿ ಚಾಕುವನ್ನು (ಎಮ್ ಓ 4) ಠಾಣಾ ಪಿ ಎಫ್ ನಂ. 17/19 ರಂತೆ ನೊಂದಾಯಿಸಿರುತ್ತೇನೆ. ನಂತರ ಆರೋಪಿಗಳನ್ನು

ನ್ಯಾಯಾಂಗ ಬಂಧನಕ್ಕೆ ಹಾಜರುಪಡಿಸುವ ಸಂಬಂಧ, ಬಂಧನ ಪತ್ರದೊಂದಿಗೆ ಸೂಕ್ತ ಬೆಂಗಾವಲಿನಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ . ಸಿಬ್ಬಂದಿ ಪ್ರಕಾಶ್ ರವರು ನೀಡಿದ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.-21 ಎಂದು, ಪ್ರಕಾಶ್ ರವರ ಸಹಿಯನ್ನು ನಿಪಿ.- 21 (ಎ) ಎಂದು , ಈ ಸಾಕ್ಷಿಯ ಸಹಿಯನ್ನು ನಿಪಿ 21 - (ಬಿ) ಎಂದು ಗುರುತಿಸಲಾಯಿತು.

6.ದಿಃ 18.02.2019 ರಂದು ಆರೋಪಿ (ಕಾ.ಸಂ. ಬಾಲಕ) ಸುಮಂತ್ ನನ್ನು ಸಿಬ್ಬಂದಿ ಪ್ರಕಾಶರವರು ನನ್ನ ಮುಂದೆ ಹಾಜರುಪಡಿಸಿ ವರದಿ ನೀಡಿರುತ್ತಾರೆ ಮತ್ತು ಅವನನ್ನು ಕಾನೂನು ಅಭಿರಕ್ಷಗೆ ಸೂಕ್ತ ಬೆಂಗಾವಲಿನೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಸದರಿ ಪ್ರಕರಣದಲ್ಲಿ ಮೃತನ ವೈದ್ಯರ ಒದಗಿಸಿದ ಬಾಂಗಿಗಳನ್ನು ಪಿ ಸಿ 131 ಅಶೋಕ್ ರವರು ಠಾಣೆಗೆ ತಂದು ಹಾಜರುಪಡಿಸಿದ ಮೆರೆಗೆ ಅದನ್ನು ಸ್ವೀಕರಿಸಿ ಠಾಣಾ ಪಿ ಎಪ್ ನಂ. 18/19 ರಂತೆ ನೊಂದಾಯಿಸಿರುತ್ತೇನೆ.

7. ದಿಃ 20.02.2019 ರಂದು ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿ ಕೊಡುವಂತೆ ಲೋಕೋಪಯೋಗಿ ಕಛೇರಿಯವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ. ದಿಃ 21.02.2019 ರಂದು ಸದರಿ ಪ್ರಕರಣದಲ್ಲಿ ಅಮಾನತ್ತು ಪಡಿಸಿರುವ ಬಾಂಗಿಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಲು ಪಿಸಿ 131 ಅಶೋಕ ರವರ ಮೂಲಕ ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ.

8. ದಿಃ 02.04.2019 ರಂದು ಸದರಿ ಪ್ರಕರಣದಲ್ಲಿ ಎಫ್ ಎಸ್ ಎಲ್ ವರದಿಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ವರದಿಗಳನ್ನು ಈಗಾಗಲೇ ನಿಪಿ- 14 ಮತ್ತು 15 ಎಂದು ಗುರುತಿಸಲಾಗಿದೆ. ಅವುಗಳನ್ನು ಪಡೆದುಕೊಂಡ ಬಗ್ಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯ ಸಹಿಗಳನ್ನು ನಿಪಿ-14(ಎ) ಮತ್ತು ನಿಪಿ-15(ಎ) ಎಂದು ಗುರುತಿಸಲಾಯಿತು. ನಂತರ

ದಿಃ06.04.2019 ರಂದು ಪ್ರಕರಣದ ಆರೋಪಿತರಾದ ಮುತ್ತುರಾಜ್ , ಆದರ್ಶಗೌಡ ಮತ್ತು ರೂಪೇಶ್ ರವರು ಮಾನ್ಯ ಉಚ್ಚನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಹಾಜರಾದ ಮೆರೆಗೆ ಸದರಿಯವರನ್ನು ವಿಚಾರಣೆ ಮಾಡಿ ಸೂಕ್ತ ಜಾಮೀನು ಮುಚ್ಚಳಿಕೆ ಪಡೆದು ಅವರನ್ನು ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿತರು ಗೈರು ಹಾಜರಿದ್ದು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ. ಗುರುತಿಸಲು ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿಗಳ ಪರ ವಕೀಲರು ಹೇಳಿರುತ್ತಾರೆ.

9. ದಿಃ 09.04.2019 ರಂದು ಸದರಿ ಪ್ರಕರಣದಲ್ಲಿ ಮೃತ ಚಿನ್ನಸ್ವಾಮಿ ಅಲಿಯಾಸ್ ಬಾಬು ರವರ ಬಾಬ್ತು ಪಿ ಎಮ್ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಪಿ ಎಮ್ ವರದಿಯನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿದೆ. ಸದರಿ ವರದಿಯನ್ನು ಪಡೆದ ಬಗ್ಗೆ ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

10. ದಿಃ 26.04.2019 ರಂದು ಮೃತನ ಮೇಲೆ ಆಗಿರುವ ಗಾಯಗಳು, ಎಮ್ ಓ 3 ಮತ್ತು 4 ರಿಂದ ಉಂಟಾಗುವ ಸಾಧ್ಯತೆಗಳು ಇದೆಯೇ ಎಂದು ಕೇಳಿ ಮೈಸೂರಿನ ಸರ್ಕಾರಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಧ್ಯಾಪಕರಿಗೆ ಮನವಿಯನ್ನು ಕೊಡಲಾಯಿತು. ದಿಃ 29.04.2019 ರಂದು ಲೋಕೋಪಯೋಗಿ ಇಲಾಖೆಯಿಂದ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ನಕಾಶೆಯನ್ನು ಈಗಾಗಲೇ ಆರೋಪಿಗಳ ಪರ ವಕೀಲರ ಒಪ್ಪಿಗೆ ಮೆರೆಗೆ ನಿಪಿ-13 ಎಂದು ಗುರುತಿಸಲಾಗಿದೆ.

11. ದಿಃ 02.05.2019 ರಂದು ಸದರಿ ಪ್ರಕರಣದಲ್ಲಿ ತನಿಖೆ ಪೂರೈಸಿ ಆರೋಪಿಗಳ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಮೃತನ

ಶವ ಪರೀಕ್ಷಾ ವರದಿ ಮತ್ತು ಚಾಕು ಮತ್ತು ಪ್ಲಾಸ್ಟಿಕ್ ಪೈಪ್ ನ್ನು ಪರೀಕ್ಷೆ ನಡೆಸಿದ ವೈದ್ಯರು ನೀಡಿದ ಅಭಿಪ್ರಾಯ ವರದಿ ದಿಃ 15.05.2019 ನೇ ದನ್ನು ದಿಃ17.05.2019 ರಂದು ನಾನು ಪಡೆದುಕೊಂಡು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ಆರೋಪಿಗಳ ಪರ ವಕೀಲರ ಒಪ್ಪಿಗೆ ಮೆರೆಗೆ ನಿಪಿ.– 22 ಎಂದು, ನಾನು ಸ್ವೀಕರಿಸಿದ ಬಗ್ಗೆ ಮಾಡಿದ ಸಹಿಯನ್ನು ನಿಪಿ.– 22 (ಎ) ಎಂದು ಗುರುತಿಸಲಾಯಿತು. ಸದರಿ ವೈದ್ಯರು ನೀಡಿದ ಮಾದರಿ ಸೀಲ್ ಮತ್ತು ಸಹಿಗಳಿರುವ ದಾಖಲೆಗಳನ್ನು ಆರೋಪಿಗಳ ಪರ ವಕೀಲರ ಒಪ್ಪಿಗೆ ಮೆರೆಗೆ ನಿಪಿ.–23 ಎಂದು ಗುರುತಿಸಲಾಯಿತು. ಎಲ್ಲಾ ಆರೋಪಿಗಳನ್ನು ನೋಡಿದರೆ ಗುರುತಿಸಿತ್ತೇನೆ. ಆರೋಪಿ 2 ರಿಂದ 7 ರವರು ಇಂದು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು, ಅವರನ್ನು ಗುರುತಿಸಲು ತಕರಾರು ಇಲ್ಲ ಎಂದು ಅವರ ಪರ ವಕೀಲರು ಹೇಳಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರ ವಿನಂತಿ ಮೆರೆಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

12.09.2023
(ಜಿ.ಎಸ್. ಸಂಗ್ರೇಶಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.